**ಉಡುಪಿ ಜಿಲ್ಲಾ ಪಂಚಾಯತ್ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಛೇರಿ ಉಡುಪಿ**

ಸಂ:ಆಶಾ:ಉನಿಟಿ:1:2016-17 ದಿ:09-11-2016.

**ಸುತ್ತೋಲೆ**

**ವಿಷಯ:-** ಶಾಲಾ ಆವರಣವನ್ನು ಕಸಮುಕ್ತಗೊಳಿಸಿ ಸ್ವಚ್ಛವಾಗಿರಿಸಿಕೊಳ್ಳುವ ಬಗ್ಗೆ

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಪನಿರ್ದೇಶಕರ ಶಾಲಾ ಭೇಟಿ ವೇಳೆ ಗಮನಿಸಿದಂತೆ ಕೆಲವೊಂದು ಶಾಲೆಗಳವರು ಶಾಲಾ ಪರಿಸರವನ್ನು ಸ್ವಚ್ಛವಾಗಿರಿಸಿಕೊಂಡಿರುವುದಿಲ್ಲ ಹಾಗೂ ಶಾಲಾ ಆವರಣದ ಮೂಲೆಯಲ್ಲಿ/ತೆರದ ಸ್ಥಳದಲ್ಲಿ ಕಸವನ್ನು ರಾಶಿ ಹಾಕಿರುತ್ತಾರೆ. ಹಾಗೂ ಈ ಕಸವನ್ನು ಸುಡಲಾಗುತ್ತಿದೆ. ಇದು ಸರಿಯಾದ ಕ್ರಮವಲ್ಲ. ಈಗಾಗಲೇ ತಿಳಿಸಿರುವಂತೆ, ತಾಜ್ಯವನ್ನು ಹಸಿ ಕಸ – ಒಣ ಕಸ (ಪ್ಲಾಸ್ಟಿಕ್ ಇತ್ಯಾದಿ) ಪ್ರತ್ಯೇಕಿಸಬೇಕು. ಅಡುಗೆ ಮನೆ ತ್ಯಾಜ್ಯ, ಹಸಿ ಕಸವನ್ನು ಪೈಪ್ ಕಂಪೋಸ್ಟ್ ವಿಧಾನದ ಮೂಲಕ ಗೊಬ್ಬರ ಮಾಡಿ ಶಾಲಾ ಕೈತೋಟಕ್ಕೆ ಬಳಸುವುದು. ಪ್ಲಾಸ್ಟಿಕ್ ವಸ್ತುಗಳನ್ನು ಪ್ರತ್ಯೇಕಿಸಿ ಮರು ಬಳಕೆಗೆ ಮಾರಾಟ ಮಾಡುವುದು. ಇವುಗಳನ್ನು ಸುಡತಕ್ಕದ್ದಲ್ಲ. ಒಟ್ಟಿನಲ್ಲಿ ಶಾಲೆಗಳಲ್ಲಿ ಉತ್ಪನ್ನವಾಗುವ ಕಸವನ್ನು ದಿನಂಪತ್ರಿ ವೈಜ್ಞಾನಿಕ ವಿಧಾನಗಳ ಮೂಲಕ ಸೂಕ್ತವಾಗಿ ವಿಲೇವಾರಿ ಮಾಡಬೇಕು. ಕಸದ ಗುಂಡಿಗಳಿಗೆ ಸೂಕ್ತ ಬೇಲಿ ನಿರ್ಮಿಸಿ ಮಕ್ಕಳಿಗೆ ಆಗುವ ಸಂಭವನೀಯ ಅಪಾಯ ತಪ್ಪಿಸಬೇಕು. ಶಾಲಾ ಪರಿಸರವನ್ನು ಸ್ವಚ್ಛ, ಕಸಮುಕ್ತ ಹಾಗೂ ಆಹ್ಲಾದಾಯಕವಾಗಿ ಇರಿಸಿಕೊಳ್ಳುವಂತೆ ಎಲ್ಲ ಶಾಲಾ ಮುಖ್ಯೋಪಾಧ್ಯಾಯರಿಗೆ ತಿಳಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವಲಯದ ಎಲ್ಲ ಶಾಲಾ ಮುಖ್ಯಸ್ಥರಿಗೆ ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಲು ಸೂಚಿಸಿದೆ.

(ದಿವಾಕರ ಶೆಟ್ಟಿ ಎಚ್)
ಉಪನಿರ್ದೇಶಕರು
ಸಾರ್ವಜನಿಕ ಶಿಕ್ಷಣ ಇಲಾಖೆ
ಉಡುಪಿ ಜಿಲ್ಲೆ ಉಡುಪಿ.

ರಿಗೆ,

1. ಜಿಲ್ಲೆಯ ಎಲ್ಲ ಶಾಲೆಗಳ ಮುಖ್ಯ ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ.
2. ಜಿಲ್ಲೆಯ ಎಲ್ಲ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಇವರಿಗೆ-ಅನುಪಾಲನೆಗಾಗಿ ಸಿ.ಆರ್.ಪಿ./ ಬಿ.ಆರ್.ಪಿ/ಇ.ಸಿ.ಒರವರಿಗೆ ಸೂಕ್ತ ನಿರ್ದೇಶನ ನೀಡುವಂತೆ ತಿಳಿಸಿದೆ.

ಪ್ರತಿಯನ್ನು ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಮಾಹಿತಿಗಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.